# ದಿಗ್ಗಜರನ್ನು ಮಣಿಸಿದ ಕೋರಿ

ಈ ಸಲದ ಪ್ರತಿಷ್ಠಿತ ವಿಂಬಲ್ಡನ್ ಟೆನಿಸ್ ಟ್ರೋಫಿಯನ್ನು ಯಾರು ಕೈಗೆತ್ತಿಕೊಳ್ಳುತ್ತಾರೆ ಎನ್ನುವುದು ಭಾನುವಾರದ ಹೊತ್ತಿಗೆ ಗೊತ್ತಾಗಲಿದೆ. ಆದರೆ ಕಳೆದ ವಾರವಿಡೀ ವಿಂಬಲ್ಡನ್‌ನಲ್ಲಿ ಕೋರಿ ಗಾಫ್‌ಳದ್ದೇ ಸುದ್ದಿ. ಇನ್ನೂ 15ರ ಹರೆಯದ ಈ ಹೈಸ್ಕೂಲ್ ಬಾಲಕಿ, ಜಗತ್ತಿನ ದಿಗ್ಗಜ ಟೆನಿಸಿಗರೆಲ್ಲ ತನ್ನೆಡೆಗೆ ಕಣ್ಣು ಬಾಯಿ ಬಿಟ್ಟುಕೊಂಡು ನೋಡುವಂತೆ ಮಾಡಿದ್ದಾಳೆ. ಅರ್ಹತಾ ಸುತ್ತಿನ ಪಂದ್ಯಗಳನ್ನೆಲ್ಲ ಗೆದ್ದು ವಿಂಬಲ್ಡನ್ ಅಂಕಣಕ್ಕೆ ಈ 15ರ ಪೋರಿ ಪ್ರವೇಶ ಪಡೆದದ್ದೇ ದೊಡ್ಡ ಸಾಧನೆ. ಟೆನಿಸ್‌ನ ಮುಕ್ತಯುಗದಲ್ಲಿ ವಿಂಬಲ್ಡನ್ ಮುಖ್ಯ ಹಂತಕ್ಕೆ ಪ್ರವೇಶ ಪಡೆದ ಜಗತ್ತಿನ ಅತ್ಯಂತ ಕಿರಿಯ ಆಟಗಾರ್ತಿ ಎಂಬ ದಾಖಲೆ ಈಕೆಯದ್ದಾಗಿದೆ. ಅದರ ಜೊತೆಗೆ ವಿಂಬಲ್ಡನ್‌ನ ಮೊದಲ ಸುತ್ತಿನ ಪಂದ್ಯಗಳಲ್ಲಿ ಜಾಗತಿಕ ಟೆನಿಸ್‌ನ ಘಟಾನುಘಟಿ ಆಟಗಾರ್ತಿಯರನ್ನು ನೆಲಕ್ಕೆ ಕೆಡವಿ ಎಲ್ಲರ ಹುಬ್ಬು ಮೇಲೇರುವಂತೆ ಮಾಡಿದ್ದಾಳೆ. ಈಕೆ ಈಗ ಟೆನಿಸ್ ಲೋಕದ ಹೊಸ ಸೆನ್ಸೇಷನ್! ಅದರಲ್ಲೂ, ಮೊದಲ ಸುತ್ತಿನಲ್ಲಿ, ಐದು ಬಾರಿಯ ವಿಂಬಲ್ಡನ್ ಚಾಂಪಿಯನ್ ವೀನಸ್ ವಿಲಿಯಮ್ಸ್‌ಳನ್ನು ನೇರ ಎರಡು ಸೆಟ್‌ಗಳಲ್ಲಿ ಸೋಲಿಸಿದ ಆಟ ಕೋಟ್ಯಂತರ ಜನರ ಮೆಚ್ಚುಗೆ ಪಡೆಯಿತು. ಕೋರಿ ಅಬ್ಬರದ ಆಟಕ್ಕೆ ಸಿಕ್ಕು ಮ್ಯಾಗ್ಡಲಿನಾ ರಿಬರಿಕೋವ ಮತ್ತು ಪೊಲನಾ ಹರ್ಕೊಗ್ ಕೂಡಾ ಸೋಲಪ್ಪಿದ್ದು ವಿಂಬಲ್ಡನ್‌ನಲ್ಲಿ ಬಹುಚರ್ಚೆಯ ವಿಷಯವಾಗಿದೆ. ಇವರಲ್ಲಿ ಮ್ಯಾಗ್ಡಲಿನಾ 2017ರಲ್ಲಿ ವಿಂಬಲ್ಡನ್ ಸೆಮಿಫೈನಲ್ ಪ್ರವೇಶಿಸಿದ್ದ ಪ್ರಮುಖ ಆಟಗಾರ್ತಿ ಎನ್ನುವುದು ಗಮನಾರ್ಹ ಸಂಗತಿ. (ಈ ಅಂಕಣ ಬರೆಯುವ ಹೊತ್ತಿಗೆ ಕೋರಿ ಕ್ವಾರ್ಟರ್ ಫೈನಲ್‌ನಲ್ಲಿದ್ದರು.)

ಕೋರಿ ಗಾಫ್ ಅಂತರರಾಷ್ಟ್ರೀಯ ಟೆನಿಸ್ ಫೆಡರೇಷನ್‌ನ ಮೊದಲ ವೃತ್ತಿಪರ ಪಂದ್ಯ ಗೆದ್ದದ್ದು 2018ರ ಮೇನಲ್ಲಿ. ಅದಾಗಿ ಒಂದು ತಿಂಗಳಲ್ಲೇ ಆಕೆ ಫ್ರೆಂಚ್ ಓಪನ್ ಜೂನಿಯರ್ ಸಿಂಗಲ್ಸ್ ಪ್ರಶಸ್ತಿ ಗೆದ್ದು ತನ್ನ ಮೊದಲ ಜೂನಿಯರ್ ಗ್ರ್ಯಾನ್‌ಸ್ಲಾಮ್ ದಾಖಲಿಸಿದಳು. ಸೆಪ್ಟೆಂಬರ್ ತಿಂಗಳಲ್ಲಿ ಯುಎಸ್ ಓಪನ್‌ನ ಬಾಲಕಿಯರ ಡಬಲ್ಸ್ ಪ್ರಶಸ್ತಿಯನ್ನು ಕೇಟಿ ಮ್ಯಾಕ್ನಲ್ಲಿ ಜೊತೆ ಸೇರಿ ಗೆದ್ದುಕೊಂಡಳು. ಕಳೆದ ವರ್ಷದ ಆಕೆಯ ಈ ಎಲ್ಲ ಸಾಧನೆಗಳ ಕಿರೀಟಕ್ಕೆ ಗರಿ ಎಂಬಂತೆ ಆರೆಂಜ್ ಬೌಲ್ ಇಂಟರ್‌ನ್ಯಾಷನಲ್ ಟೆನಿಸ್ ಪ್ರಶಸ್ತಿ ಗೆದ್ದುಕೊಂಡಳು.

ಅಮೆರಿಕದ ಫ್ಲೋರಿಡಾ ಸಂಜಾತೆ ಕೋರಿ ಗಾಫ್‌ಳನ್ನು ಮನೆಯಲ್ಲಿ ಮುದ್ದಿನಿಂದ ಕೊಕೊ ಎಂದು ಕರೆಯುತ್ತಾರೆ. ಅಪ್ಪ ಜಾರ್ಜಿಯಾ ರಾಜ್ಯ ತಂಡದಲ್ಲಿ ಬಾಸ್ಕೆಟ್‌ಬಾಲ್ ಆಟಗಾರ. ಮಗಳೂ ಬಾಸ್ಕೆಟ್‌ಬಾಲ್ ಆಟಗಾರ್ತಿಯಾಗಬೇಕು ಎನ್ನುವುದು ಆತನ ಆಸೆ. ತಾಯಿ ಅದೇ ರಾಜ್ಯ ತಂಡದಲ್ಲಿ ಹರ್ಡಲ್ಸ್ ಮತ್ತು ಹೆಪ್ಟಾಥ್ಲಾನ್ ಕ್ರೀಡಾಳು. ಮಗಳಿಗೆ ಬಾಸ್ಕೆಟ್‌ಬಾಲ್‌ನಲ್ಲಿ ಆಸಕ್ತಿ ಇರಲಿಲ್ಲ. 7ರ ಹರೆಯದಲ್ಲೇ ಟೆನಿಸ್ ಕಲಿಕೆ ಆರಂಭ. ಮೊನ್ನೆ ವಿಂಬಲ್ಡನ್‌ನಲ್ಲಿ ಈಕೆಯ ಕೈಯಲ್ಲಿ ಸೋಲುಂಡ ಸೆರೆನಾ ವಿಲಿಯಮ್ಸ್‌ಳೇ ಕೋರಿಗೆ ಬಾಲ್ಯದ ಸ್ಫೂರ್ತಿ! 13ರ ಹರೆಯದಲ್ಲೇ ಅಮೆರಿಕದ ಜೂನಿಯರ್ ಬಾಲಕಿಯರ ಟೂರ್ನಿಯ ಫೈನಲ್ ತಲುಪುದ್ದರು ಕೋರಿ ಗಾಫ್. ಟೆನಿಸ್ ತರಬೇತಿಗೆ ಪೂರ್ಣ ಸಮಯ ಕೊಡುವ ಹಿನ್ನೆಲೆಯಲ್ಲಿ ಶಾಲೆಗೆ ಹೋಗದೆ ಮನೆಯಲ್ಲೇ ಶಿಕ್ಷಣ ಪಡೆಯುತ್ತಿರುವ ಈಕೆಗೆ ತಾಯಿಯೇ ಟೀಚರ್. ಏಕೆಂದರೆ ತಾಯಿ ಹಿಂದೆ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿದವಳು. ತಂದೆಯೇ ದೈಹಿಕ ಶಿಕ್ಷಕ.

ಈಗ ವಿಂಬಲ್ಡನ್‌ನಲ್ಲಿ ಆಡುತ್ತಿರುವ ಕೋರಿ, ಖ್ಯಾತ ಟೆನಿಸಿಗ ರೋಜರ್ ಫೆಡರರ್ ಅವರು ಸ್ಥಾಪಿಸಿದ 'ಟೀಮ್ 8'ರ ಪ್ರತಿನಿಧಿ. ಫೆಡರರ್, ಮೊನ್ನೆ ವೀನಸ್ ವಿಲಿಯಮ್ಸ್ ವಿರುದ್ಧದ ಕೋರಿಯ ಆಟವನ್ನು ಪೂರ್ಣ ಲೈವ್ ಆಗಿ ನೋಡಿದ್ದಾರೆ. ವಿಶ್ವಚಾಂಪಿಯನ್ ರಫಾಲ್ ನಡಾಲ್ ಕೂಡಾ ಈಕೆಯ ಆಟವನ್ನು ಪ್ರಾಕ್ಟೀಸ್ ಕೋರ್ಟ್‌ನಲ್ಲಿ ತನ್ಮಯತೆಯಿಂದ ವೀಕ್ಷಿಸಿದ್ದಾರೆ. ಮಹಿಳೆಯರ ವಿಶ್ವ ಚಾಂಪಿಯನ್ ಸೆರೆನಾ ವಿಲಿಯಮ್ಸ್‌ನ ಕೋಚ್ ಪ್ಯಾಟ್ರಿಕ್ ಮೊರಟಗಲ್ ದಕ್ಷಿಣ ಫ್ರಾನ್ಸ್‌ನಲ್ಲಿ ನಡೆಸುತ್ತಿರುವ ಅಕಾಡೆಮಿಯಲ್ಲೇ ಕೋರಿ ಕೂಡಾ ತರಬೇತಿ ಪಡೆಯುತ್ತಿರುವುದು ವಿಶೇಷ.

ಅಮೆರಿಕದ ಒಂದು ಕಾಲದ ವಿಶ್ವಚಾಂಪಿಯನ್ ಜಾನ್ ಮೆಕೆನ್ರೊ, 'ಕೋರಿ ತನ್ನ 20 ವರ್ಷ ವಯಸ್ಸು ದಾಟುವುದರೊಳಗೆ ವಿಶ್ವದ ನಂಬರ್ ಒನ್ ಆಟಗಾರ್ತಿ ಆಗದಿದ್ದರೆ ಅದೊಂದು ದೊಡ್ಡ ಅಚ್ಚರಿ' ಎಂದಿದ್ದಾರೆ.

ದಿಗ್ಗಜರನ್ನು ಮಣಿಸಿದ ಬಳಿಕ ಕೋರಿ ನೀಡಿರುವ ಪ್ರತಿಕ್ರಿಯೆ ಕುತೂಹಲಕರ. 'ಕೋರ್ಟ್‌ನಲ್ಲಿ ಎದುರಾಳಿ ಯಾರೆಂದು ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಪಂದ್ಯ ಗೆಲ್ಲಬೇಕು ಎನ್ನುವುದಷ್ಟೇ ನನ್ನ ಗಮನದಲ್ಲಿ ಇರುತ್ತದೆ. ಎಷ್ಟೇ ದೊಡ್ಡ ಎದುರಾಳಿಯಾದರೂ ಆಕೆಯನ್ನು ಸೋಲಿಸಬಲ್ಲೆ ಎನ್ನುವ ಆತ್ಮವಿಶ್ವಾಸ ನನ್ನಲ್ಲಿದೆ' ಎಂದಿದ್ದಾಳೆ ಈ ಪೋರಿ. ಈಕೆಯ ಬ್ಯಾಕ್‌ಹ್ಯಾಂಡ್ ಹೊಡೆತಗಳು, ಅಂಗಣದಲ್ಲಿ ಚುರುಕಿನ ಪಾದಚಲನೆ ಪ್ರೇಕ್ಷಕರ ಗಮನಸೆಳೆದಿದೆ. ಸಾಮಾನ್ಯವಾಗಿ ಹುಲ್ಲಿನ ಅಂಕಣದಲ್ಲಿ ಮೊದಲ ಬಾರಿಗೆ ಆಡುವಾಗ ಉಂಟಾಗುವ ತಪ್ಪುಗಳೂ ಈಕೆಯ ಆಟದಲ್ಲಿ ಕಾಣಿಸಲಿಲ್ಲ. ವಿಶ್ವ ಟೆನಿಸ್ ಅಸೋಸಿಯೇಷನ್‌ನ ರ್‍ಯಾಂಕಿಂಗ್‌ನಲ್ಲಿ 313ನೇ ಸ್ಥಾನದಲ್ಲಿರುವ ಈ ಎಳೆಯ ಪೋರಿ, ವಿಂಬಲ್ಡನ್‌ನಲ್ಲಿ ಸೃಷ್ಟಿಸಿರುವ ಸಂಚಲನ ಮಾತ್ರ ಅಭೂತಪೂರ್ವ.

■ ಬಿಂದು




Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65